1587ನೇ ಪ್ರ. (172)
10/04/24

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ. ಬಲ್ಕೀಸ್ ಬಾನು ರವರು ನಿಯಮ-72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರ ಉತ್ತರ:**

**ಸೂಚನೆ:**

ಶಿವಮೊಗ್ಗ ಗ್ರಾಮಾಂತರ ಭದ್ರಾವತಿ ತಾಲೂಕು ವ್ಯಾಪ್ತಿಗೆ ಬರುವ ಹೊಳೆಹೊನ್ನೂರು ನೂತನ ಪಟ್ಟಣ ಪಂಚಾಯಿತಿಯಾಗಿ ಆದೇಶಿಸಿದ್ದು, ಸದರಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುವ ಎಮ್ಮೆಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಾದ ಎಮ್ಮೆಹಟ್ಟಿ, ಕೆರೆಬೀರನಹಳ್ಳಿ ಹಾಗೂ ಹೊಳೆಬೈರನಹಳ್ಳಿ ಗ್ರಾಮದಲ್ಲಿ ವಾಸಿಸುವ ಜನರು ಸಂಪೂರ್ಣ ಕೃಷಿ ಅವಲಂಬಿತರಾಗಿದ್ದು, ಈ ಮೂರು ಗ್ರಾಮಗಳನ್ನು ಹೊಳೆಹೊನ್ನೂರು ನೂತನ ಪಟ್ಟಣ ಪಂಚಾಯಿತಿಯಿಂದ ಕೈಬಿಡುವಂತೆ ಕೋರಿ ಮಾನ್ಯ ಪೌರಾಡಳಿತ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 99 ಎಂಎಲ್ಆರ್ 2020; ದಿನಾಂಕ:17/02/2021 ರನ್ವಯ ಈ ಹಿಂದೆ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಹೊಳೆಹೊನ್ನೂರು ಗ್ರಾಮ ಪಂಚಾಯಿತಿ, ಹನುಮಂತಾಪುರ ಗ್ರಾಮ ಪಂಚಾಯಿತಿಯ ಜಂಬರಘಟ್ಟ ಗ್ರಾಮ, ಎಮ್ಮೆಹಟ್ಟಿ ಗ್ರಾಮ ಪಂಚಾಯಿತಿ ಮತ್ತು ಸಿದ್ಲಿಪುರ ಗ್ರಾಮ ಪಂಚಾಯಿತಿಯ ಡಣಾಯಕಪುರ ಗ್ರಾಮ ಈ ಪ್ರದೇಶಗಳನ್ನು ಸೇರಿಸಿ ಹೊಳೆಹೊನ್ನೂರು ಪಟ್ಟಣ ಪಂಚಾಯಿತಿಯನ್ನು ರಚನೆ ಮಾಡಲಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಸೇರ್ಪಡೆ ಮಾಡಲಾಗಿರುವ ಗ್ರಾಮ ಪಂಚಾಯಿತಿಗಳಲ್ಲಿನ ಆಡಳಿತ ಮಂಡಳಿಗಳು ಸಭೆ ನಡೆಸಿ, ಸಹಮತಿ ನೀಡಿರುವ ಠರಾವನ್ನು ಪರಿಗಣಿಸಿ ಈ ಎಲ್ಲಾ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯ ವ್ಯಾಪ್ತಿಗೆ ಸೇರ್ಪಡೆ ಮಾಡಲಾಗಿರುತ್ತದೆ. ಪ್ರಸ್ತುತ ಈ ಗ್ರಾಮಗಳು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಾಗಿದ್ದು, ಅವುಗಳನ್ನು ಕೈಬಿಟ್ಟು ಗ್ರಾಮೀಣ ಪ್ರದೇಶಗಳನ್ನಾಗಿ ಮುಂದುವರೆಸಲು ಕೋರಿಕೆಗಳು ಸ್ವೀಕೃತವಾಗುತ್ತಿವೆ. ಆದರೆ, ಈಗಾಗಲೇ ಗ್ರಾಮ ಪಂಚಾಯಿತಿಗಳ ಸಹಮತಿಯ ಮೇರೆಗೆ ಎಲ್ಲಾ ಗ್ರಾಮೀಣ ಪ್ರದೇಶಗಳನ್ನು ಕ್ರೋಢೀಕರಿಸಿ ಹೊಳೆಹೊನ್ನೂರು ಪಟ್ಟಣ ಪಂಚಾಯಿತಿಯನ್ನು ರಚನೆ ಮಾಡಿರುವುದರಿಂದ ಪ್ರಸ್ತುತ ಹಂತದಲ್ಲಿ ಕೋರಲಾಗಿರುವ ಗ್ರಾಮಗಳನ್ನು ಪಟ್ಟಣ ಪಂಚಾಯಿತಿ ವ್ಯಾಪ್ತಿಯಿಂದ ಕೈಬಿಡಲು ಸಾಧ್ಯವಾಗುವುದಿಲ್ಲ.

**ಸಂಖ್ಯೆ:ನಅಇ 27 ಎಲ್‌ಸಿಕ್ಯೂ 2025.**

(ರಹೀಂ ಖಾನ್)
**ಪೌರಾಡಳಿತ ಮತ್ತು ಹಜ್ ಸಚಿವರು**